**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-366/2024 **PW**-1

**ದಿಃ 21.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎ ಬಿ ವಕೀಲರಿಂದಃ**

ನನ್ನದು ಬಟ್ಟೆ ಶೋರೂಮ ವ್ಯವಹಾರ ಇರುತ್ತದೆ. ನನ್ನ ದಾವಾದಲ್ಲಿ 30 ಲಕ್ಷ ರೂ ಆಸ್ತಿ ಮಾಲೀಕರಿಗೆ ಕೊಟ್ಟಿದ್ದೇನೆಂದು ಕಾಣಿಸಿದ್ದು ಎಂದರೆ ಸಾಕ್ಷಿ ಚೆಕ್ಕ ಮೂಲಕ ಪಾವತಿ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ವ್ಯವಹಾರದ ಬಗ್ಗೆ ಆಸಿತ ಮಾಲೀಕರನ್ನು 2021 ನೇ ಸಾಲಿನ ಜೂನ, ಜುಲೈ ತಿಂಗಳಲ್ಲಿ ಆರ್ ಎಂ ಬಿಲ್ಡರ್ಸ ಕಡೆಯಿಂದ ಬೇಟಿಯಾಗಿರುತ್ತೇನೆ. ಯಾವ ಉದ್ದೇಶಕ್ಕೋಸ್ಕರ ಸದರಿ ಮನೆಯನ್ನು ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿ ನಮ್ಮದು ಒಟ್ಟು ಕುಟುಂಬ ಇದ್ದು ನಾನು ನನ್ನ ಸ್ವಂತ ಉಪಯೋಗಕ್ಕಾಗಿ ಸದರಿ ಮನೆಯನ್ನು ತೆಗೆದುಕೊಂಡಿದ್ದೇನೆ ಎನ್ನುತ್ತಾರೆ. ಮನೆಯನ್ನು ತೆಗೆದುಕೊಳ್ಳುವ ಸಮಯದಲ್ಲಿ ಅದು ಯಾವದೇ ರೀತಿಯ ಪರ್ನಿಶಿಂಗ ಇರಲಿಲ್ಲ ಎಂದರೆ ಸರಿ. ಮನೆಯನ್ನು ತೆಗೆದುಕೊಂಡ ಸಮಯದಲ್ಲಿ ಪರ್ನಿಚರ ಕೆಲಸ ಬಾಕೀ ಇತ್ತು. ಆ ಕಾರಣಕ್ಕೆ ಇನ್ನೂ ಗೃಹ ಪ್ರವೇಶ ಮಾಡಿರುವದಿಲ್ಲ. ಪರ್ನಿಚರ ಕೆಲಸ ಮಾಡಲು ಕಾಂಟ್ರಾಕ್ಟ ಕೊಟ್ಟಿದ್ದೀರಾ ಅಥವಾ ನೀವೇ ಮಾಡಿಸುತ್ತಿದ್ದೀರಾ ಎಂದರೆ ಸಾಕ್ಷಿ ನಾನೇ ಮಾಡಿಸುತ್ತಿದ್ದೇನೆ ಎನ್ನುತ್ತಾರೆ. ಯಾವ ಪರ್ನಿಚರ ಕೆಲಸ ಎಂದರೆ ಸಾಕ್ಷಿ ಬೆಡ್ಡರೂಮನ ಪರ್ನಿಚರ ಕೆಲಸ ಎನ್ನುತ್ತಾರೆ. ಖರೀದಿ ಮಾಡಿಕೊಂಡ ದಿನದಿಂದ ಪರ್ನಿಚರ ಕೆಲಸ ಮುಂದುವರೆದೀರಾ ಎಂದರೆ ಸಾಕ್ಷಿ ಮುಂದುವರೆಸಿ 8 ತಿಂಗಳವರೆಗೂ ನಡೆದಿರುತ್ತದೆ ಎನ್ನುತ್ತಾರೆ. ಯಾವ ಯಾವ ರೂಮನಲ್ಲಿ ಯಾವ ಯಾವ ರೀತಿನು ಡಿಜೈನ ಪರ್ನಿಚರ್ಸ ಮಾಡಬೇಕೆಂಬ ಬಗ್ಗೆ ಡಿಜೈನ ಮಾಡಿಸಿ ಇಟ್ಟುಕೊಂಡಿದ್ದೀರಾ ಎಂದರೆ ಸಾಕ್ಷಿ ಮಾಡಿಸಿರುತ್ತೇನೆ ಎನ್ನುತ್ತಾರೆ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರಪಡಿಸುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಸದರಿ ಪರ್ನಿಚರಗೆ ಸಂಬಂದಿಸಿದ ಉಪಕರಣಗಳನ್ನು ಹಬೀಬ ಪ್ಲಾಯವುಡ ಎಂಬ ಅಂಗಡಿಯಲ್ಲಿ ಎನ್ನುತ್ತಾರೆ. ಅದಕ್ಕೆ ಸಂಬಂದಿಸಿದ ಬಿಲ್ಲುಗಳು ನಿಮ್ಮ ಬಳಿ ಇದೆಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸುತ್ತೇನೆ ಎನ್ನುತ್ತಾರೆ. ಸುಮಾರು 3 ರಿಂದ 4 ಲಕ್ಷ ರೂ ಗಳ ಅಂದಾಜು ಮೌಲ್ಯದ ಪ್ಲಾಯವುಡಗಳಾಗಿರುತ್ತವೆ. 30 ಲಕ್ಷ ರೂ ಗಳ ಹಣವನ್ನು ಚೆಕ್ಕ ಮೂಲಕ ಕೊಟ್ಟೆ ಎಂದು

ಹೇಳಿದ್ದು ಅದು ಯಾವ ಬ್ಯಾಂಕನ ಚೆಕ್ಕ ಎಂದರೆ ಸಾಕ್ಷಿ ಯುನಿಯನ್ ಬ್ಯಾಂಕ ಎಂದು ನುಡಿಯುತ್ತಾರೇ. ಯಾವ ದಿನಾಂಕದಂದು ಕೊಟ್ಟೆ ಎಂದರೆ ಸಾಕ್ಷಿ ಕ್ರಯ ಪತ್ರದಲ್ಲಿ ಸದರಿ ಚೆಕ್ಕ ನಂಬರ ಹಾಗೂ ಹಣ ಮತ್ತು ದಿನಾಂಕ ನಮೂದು ಇದೆ ಎನ್ನುತ್ತಾರೆ. ಸದರಿ ಮನೆಯನ್ನು ನಿಮ್ಮ ಸ್ವಂತ ಉಪಯೋಗಕ್ಕೆಂದು ತೆಗೆದುಕೊಂಡೆ ಎಂದು ಹೇಳಿದ್ದು ಅದನ್ನು ಬೇಗ ಕೆಲಸ ಮುಗಿಸಿ ಯಾಕೆ ಉಪಯೋಗಿಸಲಿಲ್ಲ ಎಂದರೆ ಸಾಕ್ಷಿ ನಾನು ನನ್ನ ಸ್ವಂತ ಕೆಲಸದಿಂದ ಬ್ಯುಜಿ ಇದ್ದೆ ಎನ್ನುತ್ತಾರೆ. ಎಷ್ಟು ದಿನಗಳವರೆಗೆ ನೀವು ನಿಮ್ಮ ಕೆಲಸದಲ್ಲಿ ಬ್ಯುಜಿ ಇದ್ದೀರಿ ಎಂದರೆ ಸಾಕ್ಷಿ ಸುಮಾರು 5 ರಿಂದ 6 ತಿಂಗಳು ಎನ್ನುತ್ತಾರೆ. 6 ತಿಂಗಳ ನಂತರ ಪರ್ನಿಚರ ಕೆಲಸ ಮುಗಿಸಿ ಮನೆ ಓಪನ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ತೊಂದರೆ ಇರಲಿಲ್ಲ ಎನ್ನುತ್ತಾರೆ. ನಿಪಿ 1 ಕ್ರಯ ಪತ್ರದಲ್ಲಿ ಆ ಮನೆಗೆ ಹೋಗುವ ಸದಸ್ಯರು ಪ್ರತಿ ತಿಂಗಳು ತಿಂಗಳ ಮೇಂಟೇನನ್ಸ ಚಾರ್ಜ ಕೊಡಬೇಕೆಂದು ನಮೂದು ಇದೆ ಈ ರೀತಿ ನೀವು ಸಂಬಂದಪಟ್ಟ ಅಸೋಸಿಯೇಶನಲ್ಲಿ ಹೆಸರು ನೋಂದಾಯಿಸಿ ಮೇಂಟೇನನ್ಸ ಚಾರ್ಜ ಕೊಡುತ್ತಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಿನಾಂಕಃ25.03.2022 ರಂದು ನಾನು ಮೊದಲಿಗೆ ಸದರಿ ಪ್ಲಾಟಗೆ ಹೋಗಿರುತ್ತೇನೆ.  ಹೊಸದಾಗಿ ಮನೆಗೆ ಹೋದ ನಂತರ ಅಲ್ಲಿ ನಿಂತು ನೀವಾಗಲಿ ನಿಮ್ಮ ಕುಟುಂಬದವರಾಗಲಿ ಪೋಟೋ ವಗೈರೆ ತೆಗೆದುಕೊಂಡಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಅಪಾರ್ಟಮೆಂಟನಲ್ಲಿ ಯಾವ ಯಾವ ಪ್ಲಾಟನಲ್ಲಿ ಯಾರು ಯಾರು ವಾಸ ಇದ್ದಾರೆಂಬ ಬಗ್ಗೆ ನೇಮ ಬೋರ್ಡ ಇದ್ದು ಅದರಲ್ಲಿ ಏನಾದರೂ ನಿಮ್ಮ ಹೆಸರು ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಮ್ಮ ಕುಟುಂಬದ ವಾಸಕ್ಕೋಸ್ಕರ ನಾನು ಈ ಮನೆಯನ್ನು ಖರೀದಿಸಿದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ನನಗೆ ಅಂತಾ ಯಾವದೇ ಉದ್ದೇಶ ಇರಲಿಲ್ಲ ಎಂದರೆ ಸಾಕ್ಷಿ ಸೇಲ ಡೀಡ ಮಾಡಿಕೊಂಡಿದ್ದೇನೆ ಸುಳ್ಳಾಕ್ಕೆ ಹೇಳಲಿ ಎನ್ನುತ್ತಾರೆ. ಆರ್ ಎಂ ಬಿಲ್ಡರ್ಸ ರವರಿಗೆ ಬೇಕಾಯ್ದೇಶೀರವಾಗಿ ಅವರಿಗೆ ಬೇಕಾಗಿರುವ ಲೇವಾದೇವಿ ವ್ಯವಹಾರಕ್ಕೆ ಸಂಬಂದಿಸಿದಂತೆ ಹಣ ಕೊಟ್ಟು ನಾನು ಈ ಖೊಟ್ಟಿ ಕಾಗದ ಬರೆಸಿಕೊಂಡಿರುತ್ತೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ದಿನಾಂಕಃ25.03.2022 ರಂದು ಆ ಮನೆಗೆ ಹೋಗಿದ್ದಕ್ಕೆ ಮತ್ತೆ ಯಾವಾಗ ಹೋದಿರಿ ಎಂದರೆ ಸಾಕ್ಷಿ ಆರು ತಿಂಗಳ ಬಿಟ್ಟು ಹೋಗಿರುತ್ತೇನೆ ಎನ್ನುತಾರೆ ಆದರೆ ದಿನಾಂಕ ಹೇಳಲು ಆಗುವದಿಲ್ಲ ಎನ್ನುತ್ತಾರೆ. ಆದಾದ ನಂತರ ಮೇ ತಿಂಗಳ 2024 ರಂದು ಹೋಗಿರುತ್ತೇನೆ. ಆ ಸಮಯದಲ್ಲಿ ನಿಮ್ಮ ಜೊತೆ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನನ್ನ ಅಣ್ಣ ತಮ್ಮಂದಿರಾದ ನಾರಾಯಣ, ದೇವಾನಂಧ ಅನೀಲ ಹಾಗೂ ರಾಜೇಶ ರವರು ಹೋಗಿದ್ದೇವೆ ಎನ್ನುತ್ತಾರೆ. ಯಾವ ಕಾರಣಕ್ಕೆ ಹೋಗಿದ್ದೀರಿ ಎಂದರೆ ಸಾಕ್ಷಿ ಪ್ರತಿವಾದಿ ಚಾವಿ ಮುರಿದು ಮನೆ ಒಳಗಡೆ ಹೋಗಿದ್ದರೆಂಬ ಕಾರಣಕ್ಕೇ ನಾವು ಹೋಗಿದ್ದೆವು ಎನ್ನುತ್ತಾರೆ. ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿ ನಮಗೆ ಯಾರೂ ಹೇಳಲಿಲ್ಲ ನಾವು ಅಲ್ಲಿಗೇ ಹೋದ ನಂತರ ಪ್ರತಿವಾದಿ ಡಿಸೆಂಬರ 2023 ರಲ್ಲಿ ಚಾವಿ

ಮುರಿದು ಮನೆ ಒಳಗಡೆ ಹೋಗಿದ್ದರೆಂದು ಗೊತ್ತಾಯಿತು ಎನ್ನುತ್ತಾರೆ. ಡಿಸೆಂಬರ 23 ರಲ್ಲಿ ಚಾವಿ ಮುರಿದು ಮನೆ ಒಳಗಡೆ ಹೋಗಿದ್ದಾರೆಂಬ ವಿಷಯವನ್ನು ನಿಮಗೆ ಯಾರು ಹೇಳಿದ್ದು ಎಂದರೆ ಸಾಕ್ಷಿ ನಾವು ಅಲ್ಲಿಗೆ ಹೋದಾಗ ಸೆಕ್ಯುರಿಟಿ ರವರು ಹೇಳಿದ್ದಾರೆ ಎನ್ನುತ್ತಾರೆ. ನಾನು ವಿದ್ಯಾನಗರ ಪೊಲೀಸ ಠಾಣೆಯಲ್ಲಿ ಪ್ರತಿವಾದಿ ಮೇಲೆ ಒಂದು ದೂರ ಕೊಟ್ಟಿದ್ದೇವೆಂದರೆ ಸರಿ. ಆ ದೂರಿನಲ್ಲಾಗಲಿ ಅಥವಾ ದಾವಾದಲ್ಲಾಗಲಿ ಒಬ್ಬ ಸೆಕ್ಯುರಿಟಿ ಗಾರ್ಡ ನಮಗೆ ಈ ಮಾಹಿತಿ ಕೊಟ್ಟಿರುತ್ತಾನೆಂದು ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿಲ್ಲ ಎನ್ನುತ್ತಾರೆ. ಆ ಸೆಕ್ಯುರಿಟಿ ಗಾರ್ಡನ್ನು ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಆತ ಈಗ ಇಲ್ಲ ಹೋಗಿರುತ್ತಾನೆ ಎನ್ನುತ್ತಾರೆ. ಯಾವ ಸೆಕ್ಯುರಿಟಿ ಗಾರ್ಡ ಕೂಡಾ ನಮಗೆ ಈ ಮಾಹಿತಿ ಕೊಟ್ಟಿಲ್ಲ ಕೇವಲ ಸುಳ್ಳು ಕಾರಣ ಹುಡುಕಿ ಪ್ರತಿವಾದಿಯ ಮೇಲೆ ದೂರು ಕೊಟ್ಟು ದಾವಾ ಸಲ್ಲಿಸುವ ಪ್ರಯತ್ನ ಮಾಡಿರುತ್ತೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ನಾನು ಕೊಟ್ಟಿರುವ ಹಣ ಬಡ್ಡಿ ವ್ಯವಹಾರಕ್ಕೆ ಆಗಿರುವ ಕಾರಣ ಮನೆ ತೆಗೆದುಕೊಳ್ಳುವಂತಹ ಅಥವಾ ಅದರ ಪರ್ನಿಚರ ಕೆಲಸ ಮಾಡುವಂತಹ ಯಾವದೇ ಕೆಲಸ ಆಗಿಲ್ಲ ಎಂದರೆ ಸಾಕ್ಷಿ ನಾನು ಬಡ್ಡಿ ವ್ಯವಹಾರ ಮಾಡುವದೇ ಇಲ್ಲ ಎನ್ನುತ್ತಾರೆ. ನನ್ನ ಸ್ವಂತ ಉಪಯೋಗಕ್ಕೆ ಎನ್ನುವ ಉದ್ದೇಶ ಇದ್ದಲ್ಲಿ ನಾನು ಮನೆ ತೆಗೆದುಕೊಂಡ ತಕ್ಷಣ ಅಥವಾ ಪರ್ನಿಚರನ ಕೆಲಸ ಬೇಗ ಮುಗಿಸಿ ಮನೆಯನ್ನು ಉಪಯೋಗಿಸುತ್ತಿದ್ದೆ ಎಂದರೆ ಸಾಕ್ಷಿ ಪರ್ನಿಚರ ಮಾಡಿಸಿಕೊಂಡು ಹೋಗಬೇಕೆಂದು ವಿಚಾರ ಮಾಡಿದ್ದೇವೆ ಎನ್ನುತ್ತಾರೆ.

2. ಆರ್ ಎಂ ಬಿಲ್ಡರ್ಸ ರವರು ನಮಗೆ ಕೊಡಿಸಿದಂತಹ ಪ್ಲಾಟನಲ್ಲಿ ಬೇರೆಯವರು ಇದ್ದಾರೆಂದು ಗೊತ್ತಾದ ನಂತರ ನೀವು ಅವರಿಗೆ ನೋಟೀಸು ಕೊಟ್ಟಿರಾ ಎಂದರೆ ಸಾಕ್ಷಿ ನೋಟೀಸು ಕೊಟ್ಟಿಲ್ಲ ಕಾರಣ ಸೇಲ ಡೀಡ ಆಗಿತ್ತು ಎನ್ನುತ್ತಾರೆ. ಖರೀದಿ ಮಾಡಿದ ಆಸ್ತಿ ಒಂದು ವೇಳೆ ತಂಟೆ ತಕರಾರು ಬಂದಲ್ಲಿ ಆ ವಿಚಾರವನ್ನು ಖರೀದಿ ಮಾಡಿಸಿಕೊಟ್ಟವರಿಗೆ ಹೇಳುತ್ತೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಮಗೆ ಖರೀದಿ ಕೊಡಿಸಿದಂತಹ ಆರ್ ಎಂ ಬಿಲ್ಡರ್ಸ ರವರನ್ನು ಈ ಕೇಸನಲ್ಲಿ ಪಕ್ಷಗಾರರಾಗಿ ಕಾಣಿಸಿಲ್ಲ ಎಂದರೆ ಸರಿ. ಆರ್ ಎಂ ಬಿಲ್ಡರ್ಸ ರವರು ರಾಜೇಶ್ವರಿ ರತ್ನಾಕರ ಇವರ ಹೆಸರಿಗೆ ಸಂಬಂದಿಸಿದಂತೆ ಸದರಿ ಪ್ಲಾಟನ ಸಂಚಗಾರ ಪತ್ರ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ಸಂಚಗಾರ ಪತ್ರ ಆದ ನಂತರ ರಾಜೇಶ್ವರಿ ಹಿರೇಮಠ ರವರು ಮನೆಯನ್ನು ತೆಗೆದುಕೊಂಡು ಪರ್ನಿಶಿಂಗ ಮಾಡಿ ನಂತರ ಮನೆ ಓಪನ ಮಾಡಿ ವಾಸ ಇರಲು ಪ್ರಾರಂಬಿಸಿರುತ್ತಾರೆಂದರೆ ಚಾವಿ ಮುರಿದು ಒಳಗೆ ಹೋಗಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ದಾವಾದಲ್ಲಾಗಲಿ ಅಥವಾ ಪಿರ್ಯಾದಿದಲ್ಲಾಗಲಿ ರಾಜೇಶ್ವರಿ ಹಿರೇಮಠ ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಮನೆಗೆ ಹಿರಿಯವರು ರತ್ನಾಕರ ಹಿರೇಮಠ ಆಗಿರುವ ಕಾರಣ ಅವರನ್ನು ಪಾರ್ಟಿ ಮಾಡಿದ್ದೇನೆ ಎನ್ನುತ್ತಾರೆ. ಸದರಿ ಅಪಾರ್ಟಮೆಂಟನಲ್ಲಿ

ಸದರಿ ರಾಜೇಶ್ವರಿ ಹಿರೇಮಠ ರವರು ಮನೆ ಬೀಗ ಒಡೆದು ಒಳಹೋಗಿದ್ದಾರೆಂದು ಹೇಳಿದ್ದು ಆದರೆ ಅಲ್ಲಿ ಸಿ ಸಿ ಟಿವಿ ಕ್ಯಾಮರಾ ಇದ್ದು ಮತ್ತು ಸೆಕ್ಯುರಿಟಿ ಗಾರ್ಡಗಳು ಇದ್ದು ಒಂದು ವೇಳೆ ಅಂತಹ ಅಹಿತಕರ ಘಟನೇ ನಡದ್ದಿದ್ದೇ ಆದರೆ ಮಾಲೀಕರಿಗೆ ಅಥವಾ ಪೊಲೀಸರಿಗೆ ದೂರು ನೀಡಲಾಗುತ್ತದೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನೀವೇನಾದರೂ ರಾಜೇಶ್ವರಿ ಹಿರೇಮಠರವರು ಈ ರೀತಿ ಅಹಿತಕರ ಘಟನೆ ಮಾಡಿದ್ದಾರೆಂದು ರುಜುವಾತು ಪಡಿಸಲು ಸಾಕ್ಷ್ಯಾದಾರಗಳನ್ನು ಸಂಗ್ರಹಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**